ಮಾನ್ಯ ಶಾಸಕರು ಹೇಳಿದಂಥ ದೌರ್ಭಾಗ್ಯ ಏನೆಂದರೆ, ನಾನು ಹಿಂದೆ 1994ರಲ್ಲಿ ಸಮಾಜ ಕಲ್ಯಾಣ ಸಚಿವನಾಗಿದ್ದಾಗಲೂ ಆ ಕಟ್ಟಡ ನೋಡಿದ್ದೇನೆ. ಮೊನ್ನೆ ಮಂತ್ರಿಯಾದ ಮೇಲೆ ನೋಡಿದ್ದೇನೆ. ಆ ಕಾರಣಕ್ಕಾಗಿ ಅದನ್ನು ಕೆಡವಿ ಹೊಸದಾಗಿ ಕಟ್ಟುವುದಕ್ಕಾಗಿ ಅಂದಾಜನ್ನು ಮಂಜೂರು ಮಾಡಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಮಧ್ಯದಲ್ಲಿ ಏನಾಯಿತು ಎಂದರೆ, ಲೋಕಾಯುಕ್ತದಲ್ಲಿ ಅದೇನೋ ತನಿಖೆ ನಡೆಯುತ್ತಿದೆ. ಆ ತನಿಖೆ ಆಗುವವರೆಗೆ ಅದನ್ನು ಒಡೆಯಬಾರದು ಎಂದು ಕೋರ್ಟಿನಿಂದ ಸ್ಟೇ ತಂದಿದ್ದೀರಿ, ನಿಮ್ಮೆದುರಿಗೆ ನಾನು ಹೇಳಿದ್ದೇನೆ. ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದೇವೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟಿದ್ದೇವೆ. ಹಣ ಬಿಡುಗಡೆ ಮಾಡಿದ್ದೇವೆ. ಇದರ ಕಾರಣಕ್ಕಾಗಿ ಅದನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಲ್ಲ.

ಶ್ರೀ ಎನ್. ಯೋಗೀಶ್‌ಭಟ್ : ಲೋಕಾಯುಕ್ತರ ಪ್ರಿಲಿಮಿನರಿ ಯಾವುದು ವರದಿ ಇದೆ. ಅದು ಬಂದ ನಂತರ ಅದನ್ನು ಕೆಡವಬಹುದಾಗಿತ್ತು. ಕೆಡವಲಿಕ್ಕೆ ಐದು ಲಕ್ಷ ರೂಪಾಯಿ ಬೇಕು. ಇದುವರೆಗೆ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಟಾಸಿಂಗ್ ಆಗುತ್ತಿದೆ. ಯಾರೂ ಕ್ರಮ ತೆಗೆದುಕೊಳ್ಳಲಿಕ್ಕೆ ಹೋಗುತ್ತಿಲ್ಲ. ಇದೊಂದು ದುರದೃಷ್ಟ. ಅಲ್ಲಿ ಎಷ್ಟು ಒತ್ತಡ ಇದೆ. ಊರ್ವ, ವೆಲ್ಸ್ ಪೇಟೆ, ಮಂಗಳೂರಿನಲ್ಲಿರುವ ಪ್ರಮುಖ ಪ್ರದೇಶಗಳಲ್ಲಿ ಒಂದು ಹಾಸ್ಟೆಲ್ ಇದೆ. ಇವತ್ತಿನವರೆವಿಗೂ ಒಂದು ನಿರ್ಧಾರ ತೆಗೆದುಕೊಳ್ಳಲಿಕ್ಕೆ ಆಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದರ ಸಂಪೂರ್ಣ ವಿಚಾರ ನನಗೆ ಗೊತ್ತಿದೆ. ವಾಸ್ತವಿಕವಾಗಿ ಆ ಕಟ್ಟಡವನ್ನು ಕಟ್ಟಿದವರು, ಹಿಂದಿನ ಮಂಗಳೂರಿನ ನಗರ ಸಭೆಯವರು ಅದನ್ನು ಲೋಕೋಪಯೋಗಿ ಇಲಾಖೆಯಿಂದ ಕಟ್ಟಿರತಕ್ಕಂಥ ಕಟ್ಟಡ ಕಡೆಗೆ ಲೋಕೋಪಯೋಗಿ ಇಲಾಖೆಯಿಂದ ತನಿಖೆ ವಗೈರೆ ಎಲ್ಲಾ ನಡೆದು ಅದು ವಾಸ ಮಾಡುವುದಕ್ಕೆ ಯೋಗ್ಯ ಅಲ್ಲ ಎಂದು ತೀರ್ಮಾನ ಆದಮೇಲೆ, ಅಲ್ಲಿ ತನಿಖೆ ಪೂರ್ಣ ಆಗುವವರೆಗೆ ನಾವು ಏನು ಮಾಡದೇ ಇರತಕ್ಕಂಥ ಪರಿಸ್ಥಿತಿ ಇದೆ. ಆದಾಗ್ಯೂ ಕೂಡ ನಾನು ತಮ್ಮ ಒತ್ತಾಯದ ಮೇಲೆ ಅಂದಾಜು ಸ್ಯಾಂಕ್ಷನ್ಮಾಡಿ ಕೊಟ್ಟಿದ್ದೇನೆ ಕೆಲಸ ಪ್ರಾರಂಭ ಮಾಡಬೇಕು ಅಥವಾ ಟೆಂಡರ್ ಕರೆಯಬೇಕು ಎನ್ನುವ ಹಂತದಲ್ಲಿ ಇದು ನೀವು ತನಿಖೆ ಪೂರ್ಣ ಆಗುವವರೆಗೆ ಮಾಡಿಕೊಡದು ಎಂದು ಆದೇಶ ಬಂದಿದ್ದರಿಂದ ಅಲ್ಲಿ ಏನೂ ಇಲ್ಲದಿದ್ದರೆ ಕಟ್ಟುವುದಕ್ಕೆ ಏನೂ ತೊಂದರೆ ಇಲ್ಲ. ಸ್ಯಾಂಕ್ಷನ್ ಆಗಿದೆ ಎಲ್ಲಾ ಆಗಿದೆ. ಬೇಕಾದರೆ ವೆರಿಫೈ ಮಾಡಿಸುತ್ತೇನೆ.

ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆ

620 (5174) : ಶ್ರೀ ರಾಜಾ ವೆಂಕಟಪ್ಪ ನಾಯಕ್ (ಸುರಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಒಂದೂ ಕೊಳವೆ ಬಾವಿಯನ್ನು ಸಹ ಕೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವಾಗ ಯೋಜನೆಯನ್ನು ಆರಂಭಿಸಲಾಗುವುದು;

ಇ) ಇಲ್ಲದಿದ್ದಲ್ಲಿ ತಪ್ಪು ಎಸಗಿರುವ ಜಿಲ್ಲೆಯ ಅಧಿಕಾರಿಗಳ ವಿರುದ್ಧ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 2002–03ರಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಒಂದು ಕೊಳವೆ ಬಾವಿಯನ್ನು ಕೊರೆದಿರುವುದಿಲ್ಲ ಎಂದು ಹೇಳುವುದು ಸರಿಯಲ್ಲ 2002–03ನೇ ಸಾಲಿನಲ್ಲಿ ಈ ಕೆಳಕಂಡ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ :–

1. ಸಾಮೂಹಿಕ ಕೊಳವೆಬಾವಿಗಳು 335
2. ವೈಯಕ್ತಿಕ ಕೊಳವೆ ಬಾವಿಗಳು 2671

ಆ) ಯೋಜನೆಯು ಅನುಷ್ಠಾನವಾಗುತ್ತಿದೆ.

ಇ) ಕೊಳವೆ ಬಾವಿಗಳನ್ನು ಕೊರೆಯುವ ಕೆಲಸವು ಪ್ರಗತಿಯಲ್ಲಿದೆ. ಆದುದರಿಂದ ತಪ್ಪಿತಸ್ಥ ಜಿಲ್ಲೆಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಜಾ ವೆಂಕಟಪ್ಪ ನಾಯಕ್ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಾನು ಏನು ಕೇಳಿದ್ದೆ ಎಂದರೆ, ನನ್ನ ತಾಲ್ಲೂಕಿನಲ್ಲಿ 2002–03ನೇ ಸಾಲಿನಲ್ಲಿ ಗಂಗಾ ಕಲ್ಯಾಣದಲ್ಲಿ ಒಂದೂ ಬೋರ್‌ವೆಲ್‌ಅನ್ನು ಕೊರೆದಿಲ್ಲ ಎಂದು ಕೇಳಿದ್ದೇನೆ. ಆದರೆ ಅದು ಇಲ್ಲಿ ಅಚ್ಚು ಆಗಿಲ್ಲ. ನಂತರ ರಾಜ್ಯದ್ದು ಕೊಟ್ಟಿದ್ದಾರೆ. ಸಂತೋಷ, ಬೇರೆ ಬೇರೆ ಕ್ಷೇತ್ರಗಳಲ್ಲಿ 335 ಸಾಮೂಹಿಕ ಕೊಳವೆಬಾವಿಗಳು, 2671 ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಒಂದು ವರ್ಷ ಮುಗಿದು ಈಗ 5ನೇ ತಿಂಗಳು ಕಳೆಯುತ್ತಿದೆ. ಇದುವರೆವಿಗೂ ಒಂದು ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ. ನಾವು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳಿಗೆ ಸಾಕಷ್ಟು ಸಾರಿ ಕೇಳಿದ್ದೇವೆ. ಒಂದು ಸಾರಿ ಸ್ಟೈಕ್ ಮಾಡುತ್ತೇನೆಂದು ನಾನು ಬೆದರಿಕೆಯನ್ನೂ ಸಹ ಕೊಟ್ಟಿದ್ದೇನೆ. ಆದರೂ ಕೂಡ ಇದುವರೆವಿಗೂ ಒಂದು ಬೋರ್‌ವೆಲ್‌ಗಳನ್ನು ಸಹ ಕೊರೆದಿರುವುದಿಲ್ಲ. ದಯಮಾಡಿ ಅಂತಹ ಅಧಿಕಾರಿಗಳ ಮೇಲೆ ಆಕ್ಷನ್‌ನ್ನು ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಅಟ್‌ಲಿಸ್ಟ್ ಆ ಬೋರ್‌ವೆಲ್‌ಗಳನ್ನು ಕೊರೆಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಕಳೆದ ಸಾರಿ ಅವರಿಗೆ ನಿಗದಿಪಡಿಸಿರತಕ್ಕಂತಹ ಪ್ರಮಾಣದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯದಿರುವುದು ನಿಜ. ಅದಕ್ಕೆ ಕಾರಣವೇನೆಂದರೆ, ಅವರಿಗೆ ಎಲ್ಲಾ ಶಾಸಕರಿಗೂ ಕೊಟ್ಟ ರೀತಿಯಲ್ಲಿಯೇ ಅವರ ಕ್ಷೇತ್ರಕ್ಕೂ ಕೊಟ್ಟಿರುವುದು ನಿಜ. ಆದರೆ ಗುತ್ತಿಗೆದಾರರು ಕೊರೆಯುವುದಕ್ಕೆ ಹಿಂದೇಟು ಹಾಕಿರುವ ಕಾರಣಕ್ಕಾಗಿ ಅದು ಆಗಲಿಲ್ಲ. ಬಾಕಿ ಉಳಿದಿರುವುದನ್ನು ಸೇರಿಸಿಕೊಂಡು ಈ ವರ್ಷ ಕ್ರೋರೆಯತಕ್ಕಂತಹ ಒಂದು ತೀರ್ಮಾನವನ್ನು ಮಾಡಿದ್ದಾರೆ. ಬೋರ್‌ವೆಲ್‌ಗಳನ್ನು ಕೊರೆಸಿಕೊಡುತ್ತಾರೆ.

ಶ್ರೀ ರಾಜಾ ವೆಂಕಟಪ್ಪ ನಾಯಕ್ : ನನ್ನ ತಾಲ್ಲೂಕಿನ ಟಾರ್ಗೆಟ್ ಬೇರೆ ತಾಲ್ಲೂಕಿಗೆ ಡಿಸ್ಟಿಬ್ಯೂಟ್ ಆಗಿದೆ ಎಂದು ನನಗೆ ತಿಳಿದುಬಂದಿದೆ. ಅದು ನಿಜವಾಗಿದ್ದರೆ ಸ್ವಲ್ಪ ಆಕ್ಷನ್‌ನ್ನು ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಪ್ರತಿ ಸಾರಿಯೂ ಇದೇ ರೀತಿಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ತರಹ ಅನುಮಾನಕ್ಕೆ ಅವಕಾಶವನ್ನು ಕೊಡಬೇಡಿ ನಿಮಗೆ ಟಾರ್ಗೆಟ್ ಏನಿದೆ, ಅದರ ಪ್ರಕಾರವೇ ಕೊಡಲೇಬೇಕಾಗುತ್ತದೆ. ಈಗ ನನ್ನ ತಾಲ್ಲೂಕಿನಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಯಾರೂ ಕೂಡ ಬರುವುದಿಲ್ಲ. ಬಿಕಾಸ್ ಅಲ್ಲಿ ಸಾಯಿಲ್ ಕಂಡೀಷನ್ ಸರಿಯಿಲ್ಲದಿರುವುದರಿಂದ ಯಾರೂ ಕೂಡ ಡ್ರಿಲ್ ಮಾಡುವುದಕ್ಕೆ ಬರುವುದಿಲ್ಲ. ನನ್ನದೂ

ಕೂಡ ಅದೇ ರೀತಿಯಾಗಿದೆ. ಆದರೆ ನಿಮಗೆ ಕಳೆದ ವರ್ಷ ಏನು ನಿಗದಿಪಡಿಸಿದ್ದರೋ ಆ ಪ್ರಮಾಣದಲ್ಲಿ ಕೊರೆಯುವುದನ್ನು ಮಾಡುತ್ತಾರೆ. ಅದಕ್ಕಾಗಿ ಅನುಮಾನವನ್ನು ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ.

ಬಿಜಾಪುರ ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳು

621 (5357) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ ಎಂಬುದು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದರೆ, 2003-04ನೇ ಸಾಲಿನಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಹೊಸ ವಸತಿ ನಿಲಯಗಳನ್ನು ಆರಂಭಿಸಲಾಗುವುದೇ;

ಇ) ಆರಂಭಿಸಲಾಗುವ ವಸತಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಗಳೆಷ್ಟು; ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳೆಷ್ಟು;

ಈ) ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಡೆಗಳಲ್ಲಿ ವಸತಿ ನಿಲಯಗಳನ್ನು ಪ್ರಾರಂಭಿಸಲಾಗುವುದು;

ಉ) ಸರ್ಕಾರ ವಸತಿ ನಿಲಯಗಳನ್ನು ಪ್ರಾರಂಭಿಸುವುದಕ್ಕಾಗಿ ಹಾಕಿಕೊಂಡ ನಿರ್ದಿಷ್ಟ ಕಾಲಮಿತಿ ಏನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಹೌದು

(ಇ ಮತ್ತು ಈ)

2003-04ನೇ ಸಾಲಿನಲ್ಲಿ ಸರ್ಕಾರವು ಉತ್ತರ ಕರ್ನಾಟಕದ ಹಿಂದುಳಿದ 7 ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ, ಬೀದರ್, ರಾಯಚೂರು, ಗುಲ್ಬರ್ಗಾ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 75 ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಜನಸಂಖ್ಯೆ, ಬೇಡಿಕೆ ಮತ್ತು ಕೊರತೆಗಳನ್ನು ಆಧರಿಸಿ ಇವುಗಳನ್ನು ಹಂಚಲಾಗುವುದು.

ಉ) 2003-04ನೇ ಸಾಲಿನೊಳಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಇಷ್ಟೆ ಇತ್ತು. ಈಗಾಗಲೇ ಮಾನ್ಯ ಸದಸ್ಯರಾದ ಸಿಂಧ್ಯಾರವರು ಕೇಳಿದ್ದಾರೆ. ನಾನು ಕೂಡ ಹೆಚ್ಚು ಕಡಿಮೆ ಅದೇ ಪ್ರಶ್ನೆಯನ್ನು ಕೇಳಿದ್ದೇನೆ. ರಾಜ್ಯದಲ್ಲಿ ಎಷ್ಟು ಸಮಾಜಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಬೇಡಿಕೆ ಇದೆ. ಎಷ್ಟು ಸ್ವಂತ ಕಟ್ಟಡಗಳು ಆಗಿವೆ ಅದರಲ್ಲಿ ಬಿಜಾಪುರ ಜಿಲ್ಲೆಗೆ ಅತಿ ಹೆಚ್ಚಿನ ವಿಶೇಷವಾದಂತಹ ಒತ್ತನ್ನು ಕೊಡಬೇಕೆಂದು ಆ ವಿಚಾರದಲ್ಲಿ ನಾನು ಪ್ರಶ್ನೆಯನ್ನು ಕೇಳಿದ್ದೆ. ಈ ವಿಚಾರವನ್ನು ನಾನು ಏತಕ್ಕಾಗಿ ಹೇಳಿದ್ದೇನೆಂದರೆ,